ಸೊಬಗಿನಲ್ಲಿ ಸರ್ವ ಸಂಪನ್ನತೆಯಲ್ಲಿ ಆತನಿಗೆ ಸಮನಾದವರು ಮೂರು ಲೋಕಗಳಲ್ಲಿ ಯಾರೂ ಇಲ್ಲ. ಪುಣ್ಯ ಪುರುಷನಾದ ಅವನಿಗೆ ಗುರು ಆತನ ತಾಯಿ! ವರ ತಪಸ್ವಿನಿಯಾಗಿ, ನಗರದ ಉಪವನದಲ್ಲಿ ಪರ್ಣಶಾಲೆಯಲ್ಲಿರುವಳಂತೆ, ಆಕೆಯ ಹೆಸರು ಚಿತ್ರಾಂಗದೆ!

'ಚಿತ್ರಾಂಗದೆಯ ಕಥೆ ವಿಚಿತ್ರ ಎಂದು ಜನ ಆಡಿಕೊಳ್ಳುವರು. ಚಿತ್ರವಾಹನನಿಗೆ ಅವಳೊಬ್ಬಳೆ ಮಗಳಾಗಿ ಹುಟ್ಟಲು, ಮಗಳನ್ನೆ ಮಗನೆಂದು ತಿಳಿದು ಪ್ರೀತಿಯಿಂದ ಸಲಹಿದನು. ನಾಡಪ್ರಭುಗಳಿಗೆ ಸೂಕ್ತವಾದಂತಹ ವೀರತನವನ್ನು ಕಲಿಸಿದನು.

'ಅವಳು ಯೌವನದಲ್ಲಿ ಬೇಟೆಗೆಂದು ಕಾಡಿನಲ್ಲಿ ಸುತ್ತಾಡುತ್ತಿರುವಾಗ, ಅಲ್ಲಿ ಓರ್ವ ಕಾವಿ ವಸ್ತ್ರವನ್ನು ಧರಿಸಿದ ಸುರಪುರುಷನನ್ನು ಕಂಡಳು. ಅವರ ಕಣ್ಣೋಟವು (ಕಂಡ ಕೂಡಲೇ ಮೋಹಿಸುವುದು) ಹೆಚ್ಚಿ, ಗಾಂಧರ್ವವಿಧಿಯಿಂದ ಮದುವೆಯಾದಳು. ಬಭ್ರುವಾಹನನ ಜನನವಾಯಿತೆಂಬುದು ಜನಜನಿತವಾದ ವೃತ್ತಾಂತವಾಗಿದೆ. ಅದು ಎಷ್ಟು ದಿಟವೊ ನನಗೆ ತಿಳಿಯದು.'

ಎಂದು ಹೇಳಿದ ಹಂಸಧ್ವಜನ ನುಡಿಯನ್ನು ಕೇಳುತ್ತ ಅರ್ಜುನನ ಎದೆಯ ಗುಹೆಯ ಆಳದಲ್ಲಿ ಒಂದು ಅತಿದೂರದ ಆ ದೂರ ಸ್ಮೃತಿ ಮೂಡಿತು.

ಬಿದಿಯವಂಚಿಸಲಹುದೆ? ಕಣ್ಮುಚ್ಚಲೇನರ್ಜುನಂ? ಆದರೆ, ಅದಕು ಇದಕು ಏನು ನಂಟು ಎಂದು ನೆನಪಿನೊಡನೆ ಅದನ್ನು ಆಚೆಗೆ ತಳ್ಳಿದನು. ಹತ್ತಿರದಲ್ಲಿಯೇ ಕಥೆ ಕೇಳುತ್ತ ಕುಳಿತಿದ್ದ ವೃಷಕೇತುನನ್ನು ಕುರಿತು, 'ಯೇ, ಯುವಕ ವೀರನೆ, ಬಭ್ರುವಾಹನನನ್ನು ಎದುರಿಸಿ ಜಯಿಸುವೆಯ ನೀನು?' ಎಂದು ಮೊದಲಾಗಿ ಮಾತಾಡತೊಡಗಿದನು. ಆದರೇನು? ವಿಧಿಯನ್ನು ವಂಚಿಸಲು ಸಾಧ್ಯವೆ? ಅರ್ಜುನನು ಕಣ್ಣು ಮುಚ್ಚಿದರೇನು? ಅದೊ, ನೋಡು ಆ ಛಾಯೆ ರಾಹುವಿನ ರೀತಿ ಹತ್ತಿರಕ್ಕೆ ಹರಿದು ಬರುತ್ತಿದೆ!

ನಿಧಾನ ನಿಧಾನವಾಗಿ ತನ್ನೆಡೆಗೆ ಹಾರಿ ಬರುತ್ತಿದ್ದ ವಿಧಿ ವಿಹಂಗಮದ ರೆಕ್ಕೆಗಳು ಛಾಯೆಯಂತೆ ಹಗಲು ಮುಗಿಯುತ್ತಿದ್ದಂತೆ ಕತ್ತಲೆಯ ಕಗ್ಗಪ್ಪು ಆಗಿ ಧರಿತ್ರಿಯನ್ನು ಆವರಿಸಿತು. ಇಂದ್ರಪುತ್ರನು ಮನಸ್ಸಿನಲ್ಲಿ ಏನನ್ನು ನೆನೆಸಿಕೊಂಡನೊ? ಮೂಡುವ ಆ ತಾರಾಸಮೂಹದೊಡನೆ ತನ್ನನ್ನು ಯಾರೂ ಅರಿಯದ ರೀತಿ ಮಾರುವೇಷವನ್ನು ಧರಿಸಿಕೊಂಡನು. ಮೆಲ್ಲಮೆಲ್ಲನೆ ಪಟ್ಟಣದ ಬೀದಿಗಳನ್ನು ಸುತ್ತಾಡಿ, ಚಿತ್ರಾಂಗದೆಯ ಪರ್ಣಶಾಲೆಯ ಬಳಿಗೆ ಬಂದನು. ಪೂಜೆಯಲ್ಲಿ ತೊಡಗಿದ್ದ ಚಿತ್ರಾಂಗಿಯನ್ನು, ಅಲ್ಲಿಯ ನಿರ್ಜನತೆ ನೀರವತೆ ನಿರ್ಭೀತಿಯನ್ನು ನೋಡಿ ಅಚ್ಚರಿಗೊಂಡನು!

ತಕ್ಷಣ ಗೌರವ ಭಾವವು ಆತನ ಎದೆಯಲ್ಲಿ ಹೊಮ್ಮಿ ಬರಲು, ತನಗೆ ತೋರಿದ ಆ ಶಂಕೆಯನ್ನು ಹೊರದೂಡಿದನು. ಹಂಸಧ್ವಜ ಹೇಳಿದ ಕಥೆಯನ್ನು ಆಲಿಸುತ್ತ ಹಲವು ವರ್ಷಗಳ ಹಿಂದೆ ಕಾನನ ಮಧ್ಯೆ ಯತಿವೇಷದಿಂದ ಬಂದ ತಾನು ಕಂಡು ಅವಳನ್ನು ಪ್ರೀತಿಸಿದೆ. ಆಮೇಲೆ ಅವಳು ಕಣ್ಮರೆಯಾಗಿ ಹೋದಳು. ಆಕೆ ರಾಣಿ ಚಿತ್ರಾಂಗದೆ ಇರಬಹುದೆ ಎಂಬ ಸಂದೇಹದಿಂದ ಬಂದು ಕಂಡ ಅರ್ಜುನನಿಗೆ ಮನದ ಶಂಕೆ ಇಲ್ಲವಾಯಿತು.

ಚಿತ್ರದಲ್ಲಿ ಚಿತ್ರಿಸುತ್ತ ಆ ಭುವನ ರಮಣೀಯ ರಮಣಿಯನ್ನು ತನ್ನ ಎದುರಿಗೆ ಇದ್ದ ರಾಣಿ ತಪಸ್ವಿನಿಯ ರೂಪಿಗೆ ಹೋಲಿಸಿ ನೋಡಿದನು! ಹೋಲಿಕೆಯೆ? ತೆಗೆ ತೆಗೆ ಅದೆಲ್ಲಿಯದು? ಅವಳೆಲ್ಲಿ ಇವಳೆಲ್ಲಿ? ಅದು ಸರ್ವ ಸೌಂದರ್ಯಸಾರ! ಇದು ನಿಸ್ಸಾರ!

ತಾಯಿತನದ ಗಾಂಭೀರ್ಯವನ್ನು ತರುಣತೆಯ ಮೋಹನ ಚಂಚಲತೆಯೊಡನೆ ಹೋಲಿಸುವುದೆ? ಪುಷ್ಪ ಗರ್ಭಿತ ನವ ವಸಂತದ ಹೊಳೆಹೊಳೆಯುವ ಮರದೊಡನೆ, ಹೂ ಹಣ್ಣುಗಳು ಬಿಡುವುದು ನಿಂತು ಹೋಗಿರುವ ಮಾಗಿಯ ಮರದ ಹೋಲಿಕೆಯೆ? ಅಂತೂ ಇಂತೂ, ಇವಳು ಅವಳಲ್ಲವೆಂದು ನಿಶ್ಚಯಿಸಿದನು. ಭ್ರಾಂತಿಗೊಳಗಾದ ನರನು ಸಂದೇಹವನ್ನು ಪರಿಹರಿಸಿಕೊಂಡು, ತನ್ನೆದೆಯನ್ನು ಸಂತೈಸಿಕೊಳ್ಳುತ್ತ ಪಾಳೆಯಕ್ಕೆ ಹಿಂತಿರುಗಿದನು.

**ಗುರುಗೆ ಗುರುವಾದವಗೆ ಗೌರವಮೆ ಗುರುಗಾಣ್ಕೆ!**

ಇಂದ್ರಜನ ಮಗ ಬಭ್ರುವಾಹನನು ಕಾವಲು ಭಟರು ತನಗೆ ತಂದಿತ್ತ ಆ ಯಜ್ಞಕುದುರೆಯ ಹಣೆಯ ಉರುವಣೆಯ ಒಕ್ಕಣೆಯ ಪಟ್ಟಲಿಖಿತ ಕನಕದ ಓಲೆಯನ್ನು ತಾನು ಓದಿದನು. ಸಾಹಸವು ಲಭಿಸಿತೆಂದು ಉತ್ಸಾಹಗೊಂಡು, ಯುದ್ಧ ಮಾಡಲು ನಿಶ್ಚಯಿಸಿದನು. ಆ ಕುರಿತು ಮಂತ್ರಿಗೆ ಆಜ್ಞೆ ಮಾಡಿದನು. ವೈರಿಯ ಕೊಲೆಗೆ ತಾಯಿಯ ಆಶೀರ್ವಾದವನ್ನು ಪಡೆಯಲು ಪುರವನದ ನಡುವೆಯಿದ್ದ ಪರ್ಣಶಾಲೆಗೆ ವೇಗವಾಗಿ ಹೋದನು. ಕುಮಾರನು ಬರುವುದನ್ನು ಕಂಡು, ತಾಯಿಯು ಪ್ರೀತಿ ಸಂಭ್ರಮದಿಂದ ಎದುರು ಬಂದಳು. ಮಣಿದ ಮಣಿಪುರೇಶಮಣಿಯನ್ನು ಬಾಗಿ ಎತ್ತಿಕೊಂಡಳು. ಬಂದ ಕಾರಣವೇನೆಂದು ಪ್ರೀತಿಯಿಂದ ಕೇಳಿದಳು.

ಶುಭ್ರ ಶ್ವೇತ ಮಡಿ ವಸ್ತ್ರವನ್ನುಟ್ಟ, ವರ ಜಪಮಣಿಯ ಕರದ, ಧ್ಯಾನದಿಂದ ಶಾಂತಿ ಅವರಿಸಿದ ಮುಖಕಮಲದ ತಾಯಿಯನ್ನು ಒಲ್ಮೆ ಉಕ್ಕುವ ರೀತಿ ಪಾರ್ಥಜನು ನೋಡಿದನು. ರಾಜಕಾರ್ಯವನ್ನು ತಿಳಿಸಿ ಆಶೀರ್ವಾದವನ್ನು ಬೇಡಿದನು. ಆಗ ಆ ಮಾತೆ ಮೈಮರೆತು ಕುಳಿತು, ಕಂಬನಿಯನ್ನು ಸುರಿಸುತ್ತ, ಮೌನಿಯಾಗಿ ಅಳತೊಡಗಿದಳು. ಅದನ್ನು ಕಂಡು ಆಶ್ಚರ್ಯಚಕಿತನಾದ ಬಭ್ರುವಾಹನನ್ನು ಉದ್ದೇಶಿಸಿ ಹೀಗೆ ಹೇಳಿದಳು:

'ಮಗನೇ, ನಿನ್ನ ಮಾತೆಯ ಅಧೈರ್ಯವನ್ನು ಕ್ಷಮಿಸು. ನಿನ್ನ ವೀರತನಕ್ಕೆ ನನ್ನ ಎದೆಯ ಹೆದರಿಕೆಯ ಹೆಣ್ಣು ನಾಚುತ್ತಿರುವಳು. ವೀರ, ರಣಧೀರ ಶೂರನೆ, ನಿನಗೆ ನನ್ನ ಸಾತ್ವಿಕತೆ ರುಚಿಸದಿದ್ದರೆ, ದೀನವಾಣಿಯನ್ನು ಆಲಿಸು, ಧರ್ಮನಂದನನು ನಡೆಸುತ್ತಿರುವ ಅಶ್ವಮೇಧಯಾಗ ಧರ್ಮಕಾರ್ಯವಾಗಿದೆ. ಧರ್ಮಸಂಸ್ಥಾಪಕನಾದ ಶ್ರೀಕೃಷ್ಣನು ಈ ಯಾಗಕ್ಕೆ ಜೀವಾತುವಾಗಿದ್ದಾನೆ. ಧರ್ಮರಾಯನ ಸಹೋದರ ಅರ್ಜುನನು ಈ ಅಶ್ವಮೇಧದ ಕುದುರೆಯ ಬೆಂಗಾವಲಿಗೆ ಬಂದಿದ್ದಾನೆ. ಪುಣ್ಯವನ್ನು ಪ್ರತಿಭಟಿಸಿ ನಿಲ್ಲುವುದು ಧರ್ಮವಲ್ಲ.

'ಧರ್ಮ ರಕ್ಷಕರೆಲ್ಲರೂ ಒಟ್ಟಾಗಿ ಕೂಡಿ ಇದಕ್ಕೆ ಸಹಾಯ ಮಾಡಬೇಕಾಗಿದೆ. ಅದಕ್ಕೆ ನೀನು ಏತಕ್ಕೆ ಅಡ್ಡಿಯಾಗಿ ನಿಲ್ಲುವೆ? ಕುಂತಿಯಪುತ್ರನು ನಿನಗೆ ಇನ್ನೊಂದು ರೀತಿಯಲ್ಲಿ ಗುರು. ನಾನು ಬಾಲ್ಯ ಕಾಲದಲ್ಲಿ ಅರ್ಜುನನ ನಾಮಜಪದಿಂದ ಬಿಲ್ವಿದ್ಯೆಯನ್ನು ಕಲಿತು ಕಲಿಯಾದೆ. ನಾನು ನಿನಗೆ ಗುರುವಲ್ಲವೆ? ಗುರುಗೆ ಗುರುವಾದವನಿಗೆ ಗೌರವಿಸುವುದೇ ಗುರುಕಾಣ್ಕೆ!

'ಗುರು ಪಿತೃವಿಗೆ ಸಮನಲ್ಲವೆ? ನೀನು ಇಂದು ಕಾಳಗಕ್ಕೆ ನಿಂತು ಪ್ರತಿಭಟಿಸಿದರೆ, ವೈರಿಯ ಸಂಹಾರದಿಂದ ಪಿತೃವಧಾ ಪಾತಕ ನಿನಗೆ ಬಿಡದೆ ಬರುವುದು ನಿಜ. ಕಂದನೇ, ನನ್ನ ಈ ನಿಶ್ಚಯ ನುಡಿಯನ್ನು ಕೇಳಿಸಿಕೊಂಡು ಕೋಪಗೊಳ್ಳಬೇಡ!'

ಪಾರ್ಥಜನು ಮಾತೆಯ ನುಡಿಗೆ ನಡುಗಿ, ಭೀತಿಯಿಂದ ಅಡಿಗಳಿಗೆ ನಮಸ್ಕರಿಸುತ್ತ,

'ಕ್ಷತ್ರಿಯರ ಪಥದಿಂದ ನಾನು ಆತನ ಕುದುರೆಯನ್ನು ಕಟ್ಟಿದೆನು. ನಿಮ್ಮ ಚಿತ್ತಕ್ಕೆ ಅದು ಸರಿಯಲ್ಲವೆನಿಸಿದರೆ, ನೀವು ಪ್ರೀತಿಪೂರ್ವಕವಾಗಿ ಏನೆಂದು ಆಜ್ಞೆ ಮಾಡುವಿರೊ ಅದರಂತೆ ನಡೆದುಕೊಳ್ಳುತ್ತೇನೆ.'

ಎಂದು ಹೇಳಿ ತಾಯಿಯನ್ನು ಸಂತೈಸಿದನು. ಆಗ ಆ ಮಾತೆಯು,

**ಪಾರ್ಥನ ಬರವಿಗುಬ್ಬದಳ್ ಚಿತ್ರೆ!**

'ಬೇಗ ನಡೆ, ನಿನ್ನ ಅಖಿಲ ರಾಜ್ಯಸಂಪತ್ತನ್ನು ಗುರುವಿಗೆ, ಧರ್ಮರಾಜನ ಸಹೋದರನಿಗೆ, ಮಧುಸೂದನನ ಪ್ರಿಯಸಖನಿಗೆ, ಆ ಗುರುವಿನ ಅಡಿದಾವರೆಗಳಿಗೆ ಅರ್ಪಿಸು. ಗೌರವಪೂರ್ವಕವಾಗಿ ಆತನನ್ನು ಪುರಕ್ಕೆ ಕರೆದುಕೊಂಡು ಬಾ. ಆ ಪರಾಕ್ರಮಿ ನರವೀರವರನ ಸಂದರ್ಶನದಿಂದ ಸಂತುಷ್ಟಳಾಗುತ್ತೇನೆ.'

ಎಂದು ಹೇಳುತ್ತ, ಮಗನಿಗೆ ಬುದ್ಧಿಯನ್ನು ಹೇಳಿ ಕಳುಹಿಸಿದಳು. ಮತ್ತೆ ಸಂಕಲ್ಪ ಪ್ರಾಪ್ತಿಗಾಗಿ ಪರಮೇಶ್ವರನನ್ನು ಪೂಜಿಸುತ್ತ, ಪಾರ್ಥನು ಬರುವುದನ್ನು ನೆನೆದು ಚಿತ್ರೆ ಹರ್ಷಗೊಂಡಳು.

ಮರುದಿನ ಬೆಳಗಿನಲ್ಲಿ ಹರಿದ ಬೆಳ್ಳಿಧಾರೆಗೆ ಮೂಡಣ ದಿಕ್ಕು ಬಾಡಿತು. ಬೆಟ್ಟಗೋಡನ್ನು ಮೆಟ್ಟಿ ಕನಕ ದಿನಮಣಿ ಮೂಡಿದನು. ಹಕ್ಕಿಗಳು ಗಾನಗೈಯ್ಯುತ್ತಿದ್ದವು. ದೇವಾಲಯದ ವಾದ್ಯ ಮೇಳಗಳು ಮಂಗಳರವವನ್ನು ಹೊಮ್ಮಿಸುತ್ತಿದ್ದವು. ಸುಪ್ರಭಾತವು ಸ್ವರ್ಗೀಯ ರಮ್ಯತೆಯನ್ನು ನೇಯ್ದಿತು. ಆ ಬಭ್ರುವಾಹನನು ತಾಯಿಯ ನಿರೂಪದಂತೆ ಯುದ್ಧವು ನಿಂದಿತೆಂದು ಪುರದೊಳಗೆ ಡಂಗೂರವನ್ನು ಸಾರಿಸಿದನು.

ನರನ ಪಾದಗಳಿಗೆ ನೈವೇದ್ಯವಾಗಿ ನೀಡಲು ಕೋಶದ ಅಮೂಲ್ಯವಸ್ತುಗಳೆಲ್ಲವನ್ನೂ ತೆಗೆಸಿದನು. ಗುಡಿ ತೋರಣಗಳನ್ನು ಕಟ್ಟಿ ನಗರವನ್ನು ಅಲಂಕರಿಸಿದನು. ಸೇನೆಯನ್ನು ಶಾಂತಿ ಧ್ವಜದಿಂದ ಸಿಂಗರಿಸಿದನು. ಗೌರವಕ್ಕೆ ಪಾತ್ರರಾದವರು ಹಾಗೂ ನಾಗರಿಕರೆಲ್ಲರನ್ನೂ ಕರೆಸಿದನು. ಅವರೆಲ್ಲರೂ ಸೇರಿಕೊಂಡು ಶೃಂಗಾರ ಸಾಗರ ತರಂಗಿಣಿಯರಂತೆ ಕನ್ನಡಿ ಕಳಶ ಹಿಡಿದು ಸಾಗಿದರು. ಸಾತ್ವಿಕ ಸುಮಂಗಳದ ಸಂಗೀತ ಶೈಲಿಯಿಂದ ಮೆರವಣಿಗೆಯ ವೈಖರಿಯಿಂದ ಪಾರ್ಥನ ಶಿಬಿರಕ್ಕೆ ನಡೆದನು.

(ಸಶೇಷ)